GLOBAL MULTIDISCIPLINARY PERSPECTIVES JOURNAL

# ಕರಾವಳಿಯ ಪತ್ರಿಕೆಗಳಲ್ಲಿ ಮಹಿಳಾ ಬದುಕಿನ ಪ್ರತಿನಿಧೀಕರಣ

**Dr. Shaila KN**
Associate Professor, Department of History, Government Arts College, Bengaluru, Karnataka, India

* Corresponding Author: **Dr. Shaila KN**

## Article Info

**ISSN (online):** 3107-3972
**Volume:** 01
**Issue:** 01
**January-February 2024**
**Received:** 24-12-2023
**Accepted:** 26-01-2024
**Published:** 28-02-2024
**Page No:** 90-93

## Abstract

ಸಮಾಜದ ಚಲನೆ, ಚಿಂತನೆ ಮತ್ತು ಪರಿವರ್ತನೆಗಳನ್ನು ದಾಖಲಿಸುವ ಪ್ರಮುಖ ಐತಿಹಾಸಿಕ ಆಕರಗಳಲ್ಲಿ ಪತ್ರಿಕೆಗಳು ಮಹತ್ವದ ಸ್ಥಾನವನ್ನು ಹೊಂದಿವೆ, ಸಮಕಾಲೀನ ಘಟನೆಗಳ ವರದಿಯ ಜೊತೆಗೆ ಸಮಾಜದಲ್ಲಿದ್ದ ಸಮಸ್ಯೆಗಳು, ಚರ್ಚೆಗಳು, ಸುಧಾರಣಾ ಆಶಯಗಳು ಹಾಗೂ ಜನಾಭಿಪ್ರಾಯಗಳನ್ನು ರೂಪಿಸುವಲ್ಲಿ ಪತ್ರಿಕೆಗಳು ಪ್ರಮುಖ ಪಾತ್ರ ವಹಿಸಿವೆ. ವಿಶೇಷ ವಾಗಿ ವಸಾಹತುಶಾಹಿ ಕಾಲಘಟ್ಟದಲ್ಲಿ ಪತ್ರಿಕೆಗಳು ಹೊಸ ವಿಚಾರಗಳ ಪ್ರಸರಣಕ್ಕೆ ವೇದಿಕೆಯಾಗಿ ಕಾರ್ಯನಿರ್ವಹಿಸಿದವು. ಈ ಹಿನ್ನೆಲೆಯಲ್ಲಿ ಮಹಿಳೆಯರ ಬದುಕಿಗೆ ಸಂಬಂಧಿಸಿದ ವಿಷಯಗಳು ಪತ್ರಿಕಾ ಲೋಕದಲ್ಲಿ ಹೇಗೆ ಮೂಡಿಬಂದವು ಎಂಬುದನ್ನು ಅಧ್ಯಯನ ಮಾಡುವುದು ಸಾಮಾಜಿಕ ಇತಿಹಾಸದ ದೃಷ್ಟಿಯಿಂದ ಮಹತ್ವದ್ದಾಗಿದೆ. ಕರಾವಳಿ ಪ್ರದೇಶವು ತನ್ನ ವೈವಿಧ್ಯಮಯ ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಹಿನ್ನೆಲೆಯಿಂದ ವಿಶಿಷ್ಟವಾದ ಸಾಮಾಜಿಕ ಪರಿಸರವನ್ನು ಹೊಂದಿತ್ತು. ಇಲ್ಲಿನ ವಿವಿಧ ಸಮುದಾಯಗಳ ಜೀವನಪದ್ಧತಿಗಳು, ಸಂಪ್ರದಾಯಗಳು ಮತ್ತು ಸಾಮಾಜಿಕ ಆಚರಣೆಗಳು ಮಹಿಳೆಯರ ಬದುಕಿನ ಮೇಲೂ ಪ್ರಭಾವ ಬೀರಿದ್ದವು. ಕುಟುಂಬ ವ್ಯವಸ್ಥೆ, ವಿವಾಹ ಪದ್ಧತಿ, ಶಿಕ್ಷಣದ ಅವಕಾಶ, ವಿಧವೆಯರ ಸ್ಥಿತಿ, ಸಾಮಾಜಿಕ ನಿರ್ಬಂಧಗಳು ಹಾಗೂ ಮಹಿಳೆಯರ ಸಾರ್ವಜನಿಕ ಬದುಕಿನಂತಹ ವಿಚಾರಗಳು ಕಾಲಾನುಕ್ರಮದಲ್ಲಿ ಚರ್ಚೆಗೆ ಬಂದವು. ಈ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳಲು ಸಮಕಾಲೀನ ಪತ್ರಿಕೆಗಳು ಗಮನಾರ್ಹ ದಾಖಲೆಗಳಾಗಿವೆ.

ಪತ್ರಿಕೆಗಳಲ್ಲಿ ಮಹಿಳೆಯರ ಕುರಿತ ಬರಹಗಳು ಕೇವಲ ವೈಯಕ್ತಿಕ ಬದುಕಿನ ನಿರೂಪಣೆಗೆ ಸೀಮಿತವಾಗಿರಲಿಲ್ಲ. ಮಹಿಳಾ ಶಿಕ್ಷಣ, ಬಾಲ್ಯವಿವಾಹ, ವಿಧವಾ ವಿವಾಹ, ವರದಕ್ಷಿಣೆ, ಸಾಮಾಜಿಕ ಅಸಮಾನತೆ, ಆರೋಗ್ಯ, ಕುಟುಂಬಜೀವನ ಮತ್ತು ಮಹಿಳೆಯರ ಸಾಮಾಜಿಕ ಸ್ಥಾನಮಾನ ಮೊದಲಾದ ಪ್ರಶ್ನೆಗಳು ವಿವಿಧ ರೂಪಗಳಲ್ಲಿ ಚರ್ಚಿಸಲ್ಪಟ್ಟವು. ಲೇಖನಗಳು, ಸಂಪಾದಕೀಯಗಳು, ಪತ್ರಗಳು, ವರದಿಗಳು, ಕವನಗಳು ಹಾಗೂ ಇತರ ಸಾಹಿತ್ಯಿಕ ಬರಹಗಳ ಮೂಲಕ ಮಹಿಳೆಯರ ಬದುಕಿಗೆ ಸಂಬಂಧಿಸಿದ ಹಲವು ಆಯಾಮಗಳು ಸಾರ್ವಜನಿಕ ಚರ್ಚೆಯ ಭಾಗವಾದವು.

ಈ ಸಂದರ್ಭದಲ್ಲಿ ಮಹಿಳಾ ಲೇಖಕಿಯರ ಕೊಡುಗೆ ವಿಶೇಷ ಗಮನಾರ್ಹವಾಗಿದೆ. ಪತ್ರಿಕೆಗಳು ಮಹಿಳೆಯರಿಗೆ ತಮ್ಮ ಅನುಭವ, ಅಭಿಪ್ರಾಯ ಮತ್ತು ಸಾಮಾಜಿಕ ಕಾಳಜಿಗಳನ್ನು ಲಿಖಿತ ರೂಪದಲ್ಲಿ ವ್ಯಕ್ತಪಡಿಸಲು ಒಂದು ವೇದಿಕೆಯನ್ನು ಒದಗಿಸಿದವು. ಮಹಿಳೆಯರ ಶಿಕ್ಷಣ ಮತ್ತು ಸಾಮಾಜಿಕ ಸ್ಥಾನಮಾನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಅವರು ತಮ್ಮದೇ ದೃಷ್ಟಿಕೋನದಿಂದ ಪ್ರಸ್ತಾಪಿಸಿದ ಸಂದರ್ಭಗಳು ಕಂಡುಬರುತ್ತವೆ. ಹೀಗಾಗಿ ಪತ್ರಿಕಾ ಬರಹಗಳನ್ನು ಅಧ್ಯಯನ ಮಾಡುವ ಮೂಲಕ ಮಹಿಳೆಯರ ಕುರಿತು ಸಮಾಜದಲ್ಲಿ ರೂಪುಗೊಂಡಿದ್ದ ಕಲ್ಪನೆಗಳ ಜೊತೆಗೆ, ಮಹಿಳೆಯರು ತಮ್ಮ ಬದುಕನ್ನು ಹೇಗೆ ನಿರೂಪಿಸಿಕೊಂಡರು ಎಂಬುದನ್ನೂ ಗುರುತಿಸಬಹುದು.

ಕರಾವಳಿಯ ಪತ್ರಿಕಾ ಪರಂಪರೆಯು ಈ ದೃಷ್ಟಿಯಿಂದ ಮಹತ್ವದ ಅಧ್ಯಯನ ಕ್ಷೇತ್ರವಾಗಿದೆ. ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟವಾದ ಬರಹಗಳು ಆ ಕಾಲದ ಸಾಮಾಜಿಕ ವಾಸ್ತವತೆಗಳ ಪ್ರಾದೇಶಿಕ ಸ್ವರೂಪವನ್ನು ಪರಿಚಯಿಸುತ್ತವೆ. ಇವುಗಳ ಮೂಲಕ ಮಹಿಳೆಯರ ಬದುಕಿನ ಕುರಿತು ರೂಪುಗೊಂಡಿದ್ದ ಸಾರ್ವಜನಿಕ ಚರ್ಚೆಗಳು, ಸುಧಾರಣೆಯ ಅಗತ್ಯದ ಕುರಿತ ಅಭಿಪ್ರಾಯಗಳು ಹಾಗೂ ಶಿಕ್ಷಣ ಮತ್ತು ಸಾಮಾಜಿಕ ಸ್ಥಾನಮಾನಕ್ಕೆ ಸಂಬಂಧಿಸಿದ ವಿಚಾರಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಅಲ್ಲದೆ, ಪತ್ರಿಕೆಗಳಲ್ಲಿ ಪ್ರಕಟವಾದ ಅಂಕಿಅಂಶಗಳು, ವರದಿಗಳು ಮತ್ತು ಅಧಿಕೃತ ಮಾಹಿತಿಗಳು ಮಹಿಳೆಯರ ಶೈಕ್ಷಣಿಕ ಹಾಗೂ ಸಾಮಾಜಿಕ ಸ್ಥಿತಿಯ ಕುರಿತು ಮತ್ತಷ್ಟು ದೃಷ್ಟಿಕೋನವನ್ನು ಒದಗಿಸುತ್ತವೆ.

ಆದ್ದರಿಂದ ಕರಾವಳಿಯ ಪತ್ರಿಕೆಗಳನ್ನು ಕೇವಲ ಸುದ್ದಿ ಮಾಧ್ಯಮಗಳೆಂದು ಪರಿಗಣಿಸದೆ, ಆ ಕಾಲದ ಸಮಾಜದ ಮನೋಭಾವ, ಚಿಂತನೆ ಮತ್ತು ಬದಲಾವಣೆಯ ಪ್ರಕ್ರಿಯೆಗಳನ್ನು ಪ್ರತಿಬಿಂಬಿಸುವ ಐತಿಹಾಸಿಕ ದಾಖಲೆಗಳಾಗಿ ಪರಿಗಣಿಸುವ ಅಗತ್ಯವಿದೆ. ಮಹಿಳಾ ಬದುಕಿನ ವಿವಿಧ ಆಯಾಮಗಳು ಪತ್ರಿಕೆಗಳಲ್ಲಿ ಯಾವ ರೀತಿಯಲ್ಲಿ ನಿರೂಪಿಸಲ್ಪಟ್ಟವು, ಯಾವ ಸಾಮಾಜಿಕ ಪ್ರಶ್ನೆಗಳು ಪ್ರಮುಖವಾಗಿ ಚರ್ಚೆಗೆ ಬಂದವು ಮತ್ತು ಮಹಿಳಾ ಲೇಖಕಿಯರು ಈ ಚರ್ಚೆಗೆ ನೀಡಿದ ಕೊಡುಗೆ ಏನು ಎಂಬುದನ್ನು ಪರಿಶೀಲಿಸುವುದು ಈ ಲೇಖನದ ಮುಖ್ಯ ಉದ್ದೇಶವಾಗಿದೆ. ಈ ಮೂಲಕ ಕರಾವಳಿಯ ಸಾಮಾಜಿಕ ಇತಿಹಾಸದಲ್ಲಿ ಪತ್ರಿಕೆಗಳ ಪಾತ್ರ ಹಾಗೂ ಮಹಿಳಾ ಬದುಕಿನ ಕುರಿತ ಸಾರ್ವಜನಿಕ ಚಿಂತನೆಯ ಬೆಳವಣಿಗೆಯನ್ನು ಗುರುತಿಸಲು ಪ್ರಯತ್ನಿಸಲಾಗಿದೆ.

**DOI:** https://doi.org/10.54660/GMPJ.2024.1.1.90-93

**Keywords:** ಪತ್ರಿಕೆ, ಲೇಖಕಿ, ಬರವಣಿಗೆ, ಸ್ತ್ರೀಯರು, ಲೇಖನ

## ಪರಿಚಯ

ಹೆಣ್ಣಿನ ಸಂವೇದನಾ ಸಾಮಥ್ಯ ಸಾಧ್ಯತೆಗಳನ್ನು ರೂಪಿಸಿದ ಮತ್ತು ನಿಯಂತ್ರಿಸಿದ ಸಾಮಾಜಿಕ ಚರಿತ್ರೆಯಲ್ಲಿ ಅವಳ ಸಹಜ ಸೃಜನಶೀಲತೆಗೆ ಪೂರಕ ವಾತಾವರಣ ದೊರೆಯಲಿಲ್ಲ. ಹೆಣ್ಣನ್ನು ಭೋಗದ ಸರಕೆಂದು ಭಾವಿಸಿದ ಅಂದಿನ ಧೋರಣೆ ಆಧುನಿಕತೆಯ ಪ್ರವೇಶದೊಂದಿಗೆ ಪವಾಡ ಸದೃಶವಾಗಿ ಬದಲಾಗುವುದು ಸಾಧ್ಯವಿರಲಿಲ್ಲ'. ಇದರಿಂದ ಹೆಣ್ಣಿನ ಅಭಿವ್ಯಕ್ತಿಯಲ್ಲಿ ಅವಳ ಪಾಲಷ್ಟು ಎಂದು ಶೋಧಿಸಿಕೊಳ್ಳುವುದು ಸುಲಭವಾಗಿರಲಿಲ್ಲ. ಅದಕ್ಕೆ ಪ್ರಧಾನ ಪರಂಪರೆಯೊಂದಿಗಿನ ಅನುಸಂಧಾನದ ಸ್ವರೂಪವನ್ನು ವಿಶ್ಲೇಷಿಸಿಕೊಳ್ಳುವುದು ತೀರಾ ಅಗತ್ಯವಾಗಿತ್ತು. ಇಂತಹ ''ಅಸ್ಮಿತೆಯ ಶೋಧ'' ಕಾಣಿಸಿಕೊಂಡದ್ದು ಸ್ತ್ರೀವಾದಿಗಳ ಚಿಂತನೆಗಳ ಫಲವಾಗಿ.

ಅದೇ ರೀತಿ ಕೆಲವು ಪ್ರಗತಿಪರ ಪುರುಷ ಸುಧಾರಣಾವಾದಿಗಳು ಸ್ತ್ರೀ ಸಬಲೀಕರಣ ಕುರಿತ ಲೇಖನಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿ ಆ ಮೂಲಕ ಸ್ತ್ರೀ ಜಾಗೃತಿಯನ್ನು ಮೂಢಿಸಿದರು.

ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದಲ್ಲಿನ ಸ್ಥಿತಿಯನ್ನು ಗಮನಿಸಿದರೆ ಪರಂಪರೆ, ಸಂಪ್ರದಾಯಗಳ ಹೆಸರಿನಲ್ಲಿ ಮೂಢನಂಬಿಕೆಗಳು, ಕಂದಾಚಾರಗಳು ಜನಜೀವನದಲ್ಲಿ ಆಳವಾಗಿ ಬೇರುಬಿಟ್ಟಿದ್ದವು. ಜೀವನದಲ್ಲಿ ಘಾಸಿಗೊಂಡ ಅನೇಕರು ಸಮಾಜದ ಮೌಢ್ಯಗಳನ್ನು ಟೀಕಿಸಿ ಮಹಿಳೆಯರ ಏಳಿಗೆಗಾಗಿ ಬರವಣಿಗೆಯನ್ನು ರೂಢಿಸಿಕೊಂಡರು. ತಮ್ಮ ಮನಸ್ಸಿನ ತುಮುಲಗಳನ್ನು ಹೊರಗೆಡಹುವುದು, ಸಮಾಜದ ಮೌಢ್ಯಗಳನ್ನು ಕಳೆಯುವುದು, ಮಹಿಳೆಯರಿಗೆ ಅವರ ಬದುಕಿನ ಸತ್ಯಚಿತ್ರಣವನ್ನು ಕೊಡುವುದರ ಮೂಲಕ ಅವರ ಅಭ್ಯುದಯವನ್ನುಂಟು ಎಮಾಡುವುದು ಅಂದಿನ ಲೇಖಕಿಯರ ಉದ್ದೇಶವಾಗಿತ್ತು. ಪ್ರೌಢಶಾಲೆಯವರೆಗೆ ವಿದ್ಯಾಭ್ಯಾಸ ಪಡೆದು ಹದಿಮೂರನೇ ವರ್ಷಕ್ಕೆ ಗೃಹಿಣಿಯಾದ ಸೀತಾದೇವಿ ಪಡುಕೋಣೆಯವರು ಬರೆದ ಪ್ರಹಸನ “ಕಟುಕರೋಹಿಣಿ ಸಂವತ್ಸರದಲ್ಲಿ” ರಾಷ್ಟ್ರಬಂಧುವಿನಲ್ಲಿ ಪ್ರಕಟವಾಗಿ ಅನಂತರ ಶಿವರಾಮ ಕಾರಂತರ “ಪುಷ್ಪ ಮಾಲೆ” ಯಲ್ಲಿ ಪುಸ್ತಕ ರೂಪ ಪಡೆಯಿತು. ಈ ನಾಟಕದಲ್ಲಿ ಗಂಡದಿರೆಲ್ಲಾ ಹೆಂಡತಿಯರಂತೆ ಮನೆವಾರ್ತೆ ನೋಡಿಕೊಂಡು ತಗ್ಗಿ ಬಗ್ಗಿ ನಡೆಯುವ ಬಗ್ಗೆ, ಹೆಂಗಸರೆಲ್ಲಾ ಹೊರಗೆ ಕೆಲಸ ಮಾಡುತ್ತಾ ಕ್ಲಬ್ಬು ಮೀಟಿಂಗುಗಳಲ್ಲಿ ಕಾಲ ಕಳೆಯುವುದು, ವಧುದಕ್ಷಿಣೆ ನೀಡಬೇಕಾದ ಪರಿಸ್ಥಿತಿ, ಮನೆಯಲ್ಲಿ ಗಂಡಸರೆಲ್ಲಾ ಸೇರಿ ತಮ್ಮ ಸಂಸಾರದ ಕಷ್ಟಸುಖಗಳನ್ನು ಹಂಚಿಕೊಳ್ಳುವುದು ಇತ್ಯಾದಿ ಘಟನೆಗಳನ್ನು ವಿನೋದತ್ಮಕವಾಗಿ ವಿಡಂಬಿಸಿ ಬರೆದಿದ್ದಾರೆ. ಸಂಸಾರ ಜೀವನ ತಿರುವು ಮುರುವಾದರೆ ಏನಾಗಬಹುದು? ಎಂಬ ಕಲ್ಪನೆಯನ್ನು ತಮ್ಮ ಬರವಣಿಗೆಯ ಮೂಲಕ ಹೊರಚೆಲ್ಲಿದ್ದಾರೆ.

**ಮಹಿಳಾ ಬದುಕಿನ ಅನಾವೃತ ಮುಖಗಳ ಅನಾವರಣ:**

ಮಟ್ಪಾಡಿ ಕಮಲಾಕ್ಷಿಯವರು ಕೇವಲ ಐದನೆಯ ತರಗತಿಯವರೆಗೆ ಶಿಕ್ಷಣವನ್ನು ಪಡೆದರೂ ಖ್ಯಾತ ಲೇಖಕಿ ಆರ್. ಕಲ್ಯಾಣಮ್ಮನವರ ಪ್ರಭಾವದಿಂದ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆಯುತ್ತಿದ್ದರು. ಬೆಂಗಳೂರಿನ ಆರ್. ಕಲ್ಯಾಣಮ್ಮನವರು ಸಂಪಾದಿಸಿ ಪ್ರಕಟಿಸುತ್ತಿದ್ದ “ಸರಸ್ವತಿ” ಪತ್ರಿಕೆಯಲ್ಲಿ ಸೀತಾದೇವಿಯವರು ಲೇಖನಗಳನ್ನು ಬರೆದಿದ್ದಾರೆ. ಇವರ “ವತ್ಸಲಾ” ಕಾದಂಬರಿಯ ಕುರಿತು ೨೯ ಜುಲೈ ೧೯೩೭ರ ನವಯುಗ ಪತ್ರಿಕೆಯಲ್ಲಿ ಪ್ರಕಟವಾದ ಜಾಹೀರಾತಿನಲ್ಲಿ “ಸ್ತ್ರೀಯರಿಗೆ ವಿದ್ಯಾಭ್ಯಾಸವಿಲ್ಲದಿರುವುದರ ಪರಿಣಾಮವನ್ನೂ ಸ್ತ್ರೀಪುರುಷ ಹೃದಯಗಳ ಪರಿಚಯವನ್ನೂ ಸೊಗಸಾಗಿ ಚಿತ್ರಿಸಿದ ಕಾದಂಬರಿ” ಎಂದು ವರ್ಣಿಸಲಾಗಿದೆ.

ಆನಂದಿ ಸದಾಶಿವರಾವ್ ಇವರು ಮಹಿಳೆಯರ ಬಗ್ಗೆ, ಸಂಸಾರದ ಬಗ್ಗೆ ಹೃದ್ಯವಾದ ನಿರೂಪಣೆಯಿಂದ ಗಟ್ಟಿ ನೆಲೆಗಟ್ಟು ಇರುವ ಕಥಾವಸ್ತುಗಳಿಂದ ಓದುಗರ ಮನಮುಟ್ಟುವುದರಲ್ಲಿ ಯಶಸ್ಸು ಪಡೆದಿದ್ದಾರೆ. ಇವರ ಕತೆಗಳು ಮತ್ತು ಲೇಖನಗಳು ನವಯುಗ, ರಾಷ್ಟ್ರ ಬಂಧು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಸ್ನೇಹಸುಧೆ, ಅಪರ್ಣ, ಕಲಾವಿದೆ ಇವು ಇವರ ಪ್ರಕಟಿತ ಪುಸ್ತಕಗಳು ಸ್ನೇಹಸುಧೆ ಎಂಬ ಕಾದಂಬರಿಯು ಅಂದಿನ ಹೆಣ್ಣು ಮಕ್ಕಳಿಗಿದ್ದ ಸ್ವಾತಂತ್ರ್ಯದ ಚೌಕಟ್ಟಿನೊಳಗೆ ಕತೆಯ ಹಂದರ ಹೆಣೆಯಲ್ಪಟ್ಟಿದೆ. ಅಪರ್ಣ ಕಥಾ ಸಂಕಲನದಲ್ಲಿ ಆನಂದಿಯವರು ಸಂಸಾರದ ವಿವಿಧ ತರಂಗಗಳನ್ನು ಹೃದ್ಯರಾಗಗಳಲ್ಲಿ ನುಡಿಸಿದ್ದಾರೆ. ಸರಸ್ವತಿಬಾಯಿ ರಾಜಾವಾಡೆಯವರು ಪ್ರಮುಖ ಪತ್ರಿಕೆಗಳಾದ ನವಯುಗ, ಕಂಠೀರವ, ಉಷಾ, ಜಯ ಕರ್ನಾಟಕ ಇವುಗಳಲ್ಲಿ ಲೇಖನಗಳನ್ನು ಬರೆದಿದ್ದಾರೆ. ಇವುಗಳಲ್ಲಿ “ಸ್ತ್ರೀಯರೂ ಅವರ ಕರ್ತವ್ಯವೂ”, “ಭಾರತ ಸ್ತ್ರೀಯ ಆದರ್ಶವೇನು?”, “ನಾರಿ ಸಮಸ್ಯೆಗೆ ಕಾರಣವೇನು?”, ”ಸ್ತ್ರೀತ್ವದ ಸುಪ್ರಭಾತವಾಗಲಿ” ಮುಖ್ಯವಾದುದು. ಇವರು ತಮ್ಮ ಲೇಖನಗಳಲ್ಲಿ ಲಿಂಗಾಧಾರಿತ, ಜಾತ್ಯಾಧಾರಿತ ಅಸಮಾನತೆಯನ್ನು ಗುರುತಿಸಿ ಪ್ರತಿಯೊಬ್ಬ ಮಹಿಳೆಗೂ ಪುರುಷರಂತೆಯೇ ಜೀವನ ಕ್ಷೇತ್ರದಲ್ಲಿ ಸಮಾನ ಅವಕಾಶ ದೊರೆಯಬೇಕು ಎಂದು ಅಭಿಪ್ರಾಯ ಪಡುತ್ತಾರೆ.

ಆಗಸ್ಟ್ ೮, ೧೯೪೦ರ ನವಯುಗ ಪತ್ರಿಕೆಯಲ್ಲಿ ಇತೀ ನಿಮ್ಮ ಸಹೋದರಿ ಎಂಬ ಅನಾಮಧೇಯ ಸ್ತ್ರೀಯು ಬರೆದ “ಸ್ತ್ರೀಯರು ಪಂಜರದ ಗಿಳಿಯಂತಿರಬೇಕೆ?” ಎಂಬ ಲೇಖನದಲ್ಲಿ “ಇಂದು ಯಾವ ಸಮಸ್ಯೆಯೇ ಬರಲಿ ಅದನ್ನು ಬಿಡಿಸುವ ಸಕಲ ಜವಾಬ್ದಾರಿ ಪುರುಷಪರದೆಂದೇ ಆಗಿದೆ. ಹೀಗಾಗಿ ದೇಶದ ಅರ್ಧಪಾಲು ಜನತೆ ಮರೆಯಲ್ಲೇ ವ್ಯವಹರಿಸುವಂತಾಗಿದೆ. ಇದು ಉತ್ತರ ಹಿಂದೂಸ್ತಾನದ ಮಾತಾದರೆ, ನಮ್ಮಜಿಲ್ಲೆಯಲ್ಲಿ ಮಹಮ್ಮದೀಯರನ್ನು ಬಿಟ್ಟರೆ ಈ ಪರದಾನಿಷ್ಠರು ಬೇರೆ ಇಲ್ಲವೆನ್ನಬಹುದು. ಆದರೆ ಇದರಿಂದ “ಮುಖಕ್ಕಿಲ್ಲ ಮರೆ” ಎಂಬ ಒಂದೇ ಸಮಾಧಾನವಲ್ಲದೆ ಸ್ತ್ರೀ ಸ್ವಾತಂತ್ರ್ಯದ ಮಾತಿಗೆ ಸರಿಯಾದ ಉತ್ತರವು ಇಲ್ಲಿಯೂ ಇಲ್ಲ. ಮಂಗಳೂರಿನ ಕೆಥೋಲಿಕ್ ಸ್ತ್ರೀಯರ ಮಾದರಿಯನ್ನು ದೃಷ್ಟಾಂತವಾಗಿತೆಗೆದುಕೊಂಡರೆ, ಅವರು ಸಲಿಗೆಯಲ್ಲಿ ಪೇಟೆಯಲ್ಲಿ ತಿರುಗಾಡುವ ರೀತಿ, ತಮ್ಮ ಅವಶ್ಯಕತೆಗಳಿಗೆ ಬೇಕಾದಲ್ಲಿ ಹೋಗುವ ರೀತಿಯನ್ನು ಕಂಡು ಸ್ವಾತಂತ್ರ್ಯದಿಂದ ಸಮಾಜಕ್ಕೇನಾದರೂ ಹಾನಿಯಾಗಿದೆಯೇ ಎಂದು ಪ್ರಶ್ನಿಸಿ ಅವರಂತೆ ತಮಗೂ ಸ್ವಾತಂತ್ರ್ಯದೊರಕಬೇಕು ಎಂಬುವುದು ಅವರ ಅನಿಸಿಕೆಯಾಗಿದೆ.”

ಅಕ್ಟೋಬರ್ ೨೦, ೧೯೩೮ ರ ನವಯುಗ ಪತ್ರಿಕೆಯಲ್ಲಿ ಪುತ್ತೂರು ದಸರಾ ಮಹೋತ್ಸವದ ಸಮಾರಂಭದಲ್ಲಿ ಶ್ರೀಮತಿ ಗಣಪತಿ ಭಟ್ ಅಕ್ಕಾದಾಸ ಶಿರ್ಶಿ ಇವರು “ವಿಧವಾ ವಿವಾಹ”ದ ಕುರಿತು ಮಾಡಿದ ಭಾಷಣದ ಸಾರವನ್ನು ನವಯುಗ ಪತ್ರಿಕೆ ಪ್ರಕಟಿಸಿತ್ತು. ಇವರು ಸ್ವತಃ ವಿಧವೆಯಾದರೂ ಮದುವೆಯಾಗಿ ಸಮಾಜಕ್ಕೊಂದು ಮೇಲ್ಪಂಕ್ತಿಯನ್ನು ಹಾಕಿಕೊಟ್ಟವರು. ಪುತ್ತೂರಿನ ದಸರಾ ಮಹೋತ್ಸವದ ಕಾರ್ಯಕ್ರಮದಲ್ಲಿ ಒಂದು ಸಾಮಾಜಿಕ ಸುಧಾರಣಾ ವೇದಿಕೆ ಕಲ್ಪಿಸಿರುವುದು ನಿಜಕ್ಕೂ ಶ್ಲಾಘನೀಯ.

ಅವರು ತಮ್ಮ ಕ್ರಾಂತೀಕಾರಿ ಭಾಷಣದಲ್ಲಿ “ನಮ್ಮ ಸ್ತ್ರೀಯರಿಗಿಂದು ಸಿಗುತ್ತಿರುವ ವಿದ್ಯಾಭ್ಯಾಸವು ಅಷ್ಟು ಚೆನ್ನಾಗಿಲ್ಲ, ಅದು ಅವರನ್ನು ಹೇಡಿಗಳನ್ನಾಗಿ ಮಾಡಿದೆ. ನಮಗೆ ನಮ್ಮ ಧೈರ್ಯವನ್ನು ಕೆರಳಿಸುವ ವಿದ್ಯೆ ಬೇಕು. ನಪುಂಸಕತ್ವವನ್ನು ಭೋಧಿಸುವ ವಿದ್ಯೆ ಬೇಡ ಎಂದರು. ವಿಧವೆಯರ ಗೋಳನ್ನು ಬಹಳವಾಗಿ ವಿವರಿಸಿದ್ದಾರೆ. ಗಂಡ ಸತ್ತೊಡನೆಯೇ ಮುಡಿ ತೆಗೆಯುವುದು, ವಪನ ಮಾಡಿಸುವುದು, ಆಭರಣಗಳನ್ನು ತೆಗೆದು ಗೋಳಾಡಿಸುವುದು ಎಂತಹ ನ್ಯಾಯವೆಂದು ಪ್ರಶ್ನಿಸಿದ್ದಾರೆ. ಇದು ಶಾಸ್ತ್ರವಲ್ಲ ಬದಲಾಗಿ ಅಂಧರೂಢಿ, ಧರ್ಮದ ಹೆಸರಿನಲ್ಲಿ ಆಗುವ ಇಂತಹ ಅನ್ಯಾಯಗಳು ಕ್ಷಣಕ್ಷಣಕ್ಕೂ ಸಂಭವಿಸುವುದನ್ನು ನಾವು ಕಾಣುತ್ತೇವೆ. ಆದರೆ ಗಂಡಸಿಗೇಕೆ ಈ ನಿಯಮವಿಲ್ಲ? ಎಂದು ಪ್ರಶ್ನಿಸಿದ ಇವರು ವಿಧವೆಯರೆಂದರೆ ಮುಡಿತೆಗೆಯುವಂತೆ, ವಿರೂಪಗೊಳಿಸುವಂತೆ - ವಿದುರರನ್ನೂ ತಲೆಬೋಳಿಸಿ, ಕಾವಿಬಟ್ಟೆಯನ್ನುಡಿಸಿ, ಸನ್ಯಾಸಿ ಮಾಡಿದರೆ ಎಷ್ಟು ಶಾಸ್ತ್ರ ಭಕ್ತರು, ರೂಢಿಯ ಭೂತದ ಪ್ರಚಾರಿಗಳು ಇದನ್ನು ಒಪ್ಪುವರು? ಎಂದರು. ವಿಧವೆಯರನ್ನು ನಿರ್ಬಂಧದಲ್ಲಿಟ್ಟು ನರಳಿಸಬೇಡಿರಿ. ವಿಧವಾ ವಿವಾಹಕ್ಕೆ ಒಪ್ಪುವವರಿಗೆ ತಡೆಯ ಬೇಡಿರಿ” ಎಂದು ವಿನಂತಿಸುತ್ತಾರೆ.

ಅಕ್ಟೋಬರ್೩೧, ೧೯೧೯ರ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಪ್ರಕಟವಾದ “ಸ್ತ್ರೀ ಶಿಕ್ಷಣ” ಎಂಬ ಲೇಖನದಲ್ಲಿ ಶಿಕ್ಷಣವನ್ನು ಹೊಂದುತ್ತಿರುವ ಸ್ತ್ರೀಯರ ಪ್ರಮಾಣದಲ್ಲಿ ಮೊದಲಿಗಿಂತ ಏರಿಕೆ ಕಂಡುಬಂದರೂ ಸರಕಾರವು ಹೊರಡಿಸಿದ ಕೆಲವು ಠರಾವುಗಳು ಸ್ತ್ರೀ ಶಿಕ್ಷಣಕ್ಕೆ ಉಂಟಾಗಿರುವ ಎಡರುಗಳನ್ನು ತೋರಿಸುತ್ತದೆ ಅವುಗಳೆಂದರೆ, ಮೊದಲನೆಯದಾಗಿ ಉಪಾಧ್ಯಾಯಿನಿಯವರ ಅಭಾವ, ಎರಡನೆಯದಾಗಿ ಸ್ತ್ರೀವರ್ಗಕ್ಕೋಸ್ಕರ ಇರುವ ಅಭ್ಯಾಸಕ್ರಮವು ಇನ್ನೂ ನಿಶ್ಚಿತವಾಗಿರದೆ ಹುಡುಗರ ಶಾಲೆಗಳಲ್ಲಿರುವ ಮೆಟ್ರಿಕ್ಯುಲೇಷನ್ನಿನ ಅಭ್ಯಾಸ ಕ್ರಮವು ಅನೇಕ ಪಾಲಕರಿಗೆ ಸಮ್ಮತವಿಲ್ಲದಿರುವುದು ಹಾಗೂ ಸ್ತ್ರೀ ಶಿಕ್ಷಣದ ಪ್ರಸಾರಕ್ಕೆ ಪರೀಕ್ಷೆಯ ಮನೋರತ್ನವು ಮೂರನೆಯ ಕಾರಣವಾಗಿದೆ. ಈ ಸಾರಾಂಶವನ್ನು ನೋಡುವಾಗ ಒಟ್ಟಿನಲ್ಲಿ ಸ್ತ್ರೀಶಿಕ್ಷಣದ ಕಡೆಗೆ ಸರಕಾರದ ದೃಷ್ಟಿಯು ವೇಧಿಸಿದೆ ಎಂದು ಬರೆಯಲಾಗಿದೆ. ಈ ಲೇಖನವು ಸ್ತ್ರೀ ಶಿಕ್ಷಣದ ಪ್ರಗತಿಯ ಕುರಿತು ಚರ್ಚಿಸುವುದರೊಂದಿಗೆ ಮುಂದಿರುವ ಸವಾಲುಗಳ ಕುರಿತು ಜಾಗೃತಿ ಮೂಡಿಸುತ್ತದೆ.

ಮೇ ೩೧, ೧೯೩೦ರ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ “ಸ್ತ್ರೀ ಸ್ವಾತಂತ್ರ್ಯ” ಎಂಬ ಸಂಪಾದಕೀಯ ಲೇಖನದಲ್ಲಿ ಸ್ತ್ರೀ ಸ್ವಾತಂತ್ರ್ಯದ ಅಗತ್ಯ ಪುರುಷರೊಡನೆ ಸ್ಪರ್ಧಿಸಲಿಕ್ಕಲ್ಲ. ಸ್ತ್ರೀಯೂ ಪುರುಷನೂ ಸಾಂಸಾರಿಕ ಜೀವನದ ಪ್ರತ್ಯೇಕ ಅಂಗಗಳೆಂಬ ತಿಳಿವೇ ಈ ತರಹದ ಭೇದಗಳಿಗೆ ಕಾರಣವಾಗಿರುತ್ತದೆ. ಸ್ತ್ರೀಯೂ ಪುರುಷನೂ ಒಂದೇ ಅಂಗದ ಎರಡು ವಿಭಾಗಗಳು ಮಾತ್ರವಾಗಿವೆ. ಇವರು ತಮ್ಮ ಲೇಖನದ ಮೂಲಕ ಸಮಾನತೆಯ ಸಹಬಾಳ್ವೆ ಯನ್ನು

ಉಲ್ಲೇಖಿಸಿದ್ದಾರೆ.

ಶ್ರೀಮತಿ ವಿದ್ವತ್ತಮಾ ಮಿಶ್ರಾರವರು, ಮಾರ್ಚ್ ೩೧, ೧೯೩೦ರ ನವಯುಗ ಪತ್ರಿಕೆಯಲ್ಲಿ ಬರೆದ "ಜಾಗೃತಗೊಂಡಿರುವ ಸ್ತ್ರೀಯರು" ಎಂಬ ಲೇಖನದಲ್ಲಿ ಅಮೇರಿಕಾದ ಸ್ತ್ರೀಯರೂ ಮತ್ತು ಸಮಾಜವೂ ಅಲ್ಲಿನ ಸ್ತ್ರೀ ಪ್ರಧಾನ ಸಂಸ್ಕೃತಿಯ ಕುರಿತು ಮಾಹಿತಿ ನೀಡಿದ್ದಾರೆ. ತುಲನಾತ್ಮಕ ರೀತಿಯಲ್ಲಿರುವ ಬರೆದ ಇವರ ಲೇಖನವು ಗಮನಾರ್ಹವಾಗಿದೆ. ಭಾರತದ ಸ್ತ್ರೀಯರಿಗೆ ಅಮೇರಿಕಾದ ಸ್ತ್ರೀಯರ ಸಾಮಾಜಿಕ ಸ್ಥಿತಿಯು ಅನೇಕ ವಿಚಾರಗಳಲ್ಲಿ ಆದರ್ಶವೂ, ಅನಿಕರಣೀಯವೂ ಆಗಿದೆ. ಅಮೇರಿಕಾದ ಸ್ತ್ರೀಯರು ಸಾಮಾಜಿಕ ಕ್ಷೇತ್ರಗಳಲ್ಲಿ ಉನ್ನತಿಗೈಯುತ್ತಾ ಪ್ರಗತಿಯ ಸೀಮೆಯನ್ನು ಮುಟ್ಟಿರುವರು. ಇಂಗ್ಲೆಂಡಿನ ಸ್ತ್ರೀಯರೂ ಸಹ ಇವರಿಗಿಂತ ಹಿಂದೆ ಬಿದ್ದಿರುವರು. ಇಂಗ್ಲೆಂಡಿನ ಸಂಸ್ಕೃತಿಯು ಪುರುಷ ಪ್ರಧಾನವಾಗಿದ್ದರೆ ಅಮೇರಿಕದ್ದು ಸ್ತ್ರೀ ಪ್ರಧಾನವಾಗಿದೆ. ಎಲ್ಲೆಲ್ಲಿಯೂ ಅವರ ಪ್ರಭಾವವೇ ಹೆಚ್ಚು. ವಿಶ್ವದಲ್ಲಿ ಸ್ತ್ರೀ ಮತ್ತು ಪುರುಷರು ಸಮಕಕ್ಷಿಗಳೂ, ಸಮಸಾಧನಾ ಸಂಪನ್ನರಾಗಿರುವರೋ ಅಂತಹ ವಿಶ್ವವೇ ಸಭ್ಯ ಎಂದಿರುವರು.

ಎಪ್ರಿಲ್ ೮, ೧೯೩೨ರ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ "ಸ್ತ್ರೀ ಸಾಮಾಜದ ಉದ್ಧಾರ" ಎಂಬ ಲೇಖನದಲ್ಲಿ ಸ್ತ್ರೀಯರು ಪುರುಷರೊಡನೆ ಏಕೆ ಕಲೆತು ಕೆಲಸ ಮಾಡಬಾರದು?. ನಿತ್ಯ ಜೀವನಕ್ರಮದಲ್ಲಿ ಸ್ತ್ರೀಯರಿಗೂ ಪುರು ಷರಿಗೂ ಭೇದವೇ ಇಲ್ಲ ಅನ್ನುವಾಗ ನಾವು ಅನಾಗರಿಕ ಬರ್ಬರರಾಗಿಯೇ ಇರಬೇಕೆ? ಎಂದು ಪ್ರಶ್ನಿಸುತ್ತಾರೆ. ಇಪ್ಪತ್ತೊಂದನೆಯ ಶತಮಾನದಲ್ಲಿ ಸುಶಿಕ್ಷಿತ ಪುರುಷನು ಯೋಚಿಸದೇ ಇರುವ ಸಮಾನತೆಯನ್ನು ಹೇಗೆ ಸ್ತ್ರೀ ಪುರುಷರು ಒಟ್ಟಾಗಿ ಕಾರ್ಯ ನಿರ್ವಹಿಸಬಹುದೆಂಬುವುದನ್ನು ಲೇಖನದಲ್ಲಿ ಚರ್ಚಿಸಲಾಗಿದೆ.

"ಭಾರತದ ಮಹಿಳೆಯ ಆದರ್ಶ" ಎಂಬ ಲೇಖನ ಎಪ್ರಿಲ್ ೧೮, ೧೯೪೦ರ ನವಯುಗ ಪತ್ರಿಕೆಯಲ್ಲಿ ತನ್ನ ಹೆಸರು ಹೇಳಿಕೊಳ್ಳಲಿಚ್ಛಿಸದ ಒರ್ವ ಸ್ತ್ರೀಯು ಬರೆದ ಲೇಖನವಾಗಿದೆ. ಭಾರತದ ಸ್ತ್ರೀಯರು ಸಾರ್ವಜನಿಕ ಸೇವಾಸಕ್ತರಲ್ಲ ಎಂಬ ಅಪವಾದದ ವಿರುದ್ಧ ಪ್ರತಿಕ್ರಿಯಿಸಿ ಬರೆದುದ್ದಾಗಿದೆ. ಸೇವಾ ಮನೋಭಾವ ಭಾರತೀಯ ಮಹಿಳೆಗೆ ರಕ್ತಗತವಾದುದು ಹಾಗೂ ಅವಳನ್ನು ನಾಚಿಸುವ ಸಂಕೋಚ ಪಡಿಸುವ, ಕೃತಕ ತಡೆಗಳಾವುದೂ ಇಲ್ಲದ ಕ್ಷೇತ್ರದಲ್ಲಿ ಭಾರತ ನಾರಿಯಿಂದಾಗುವಂತಹ ಸೇವೆಯನ್ನು ಬೇರೆಯವರು ಸಲ್ಲಿಸಲು ಸಾಧ್ಯವಿಲ್ಲ. ಐರೋಪ್ಯ ಮಹಿಳೆಯರ ಸೇವೆಯಲ್ಲಿ ಪುರುಷ ಯೋಗ್ಯವಾದ ಜಂಭ, ಕೀರ್ತಿಲಾಲಸೆ, ಪ್ರಕಾಶಕ್ಕೆ ಬರುವ ಆತುರ ಇವೆಲ್ಲವನ್ನೂ ಕಾಣಬಹುದು. ಆದರೆ ಹಿಂದೀ ಮಹಿಳೆಯ ಸೇವೆ ಭಿನ್ನವಾದುದು. ಅದಕ್ಕೊಂದು ಪೋಷಾಕ್ಕಿಲ್ಲ; ಅದು ಬರಿಯ ತಿರುಳು ಮಾತ್ರ, ಸ್ವಭಾವ ಜನ್ಯವಾದ ಈ ಸೇವೆಯ ಲಾಭ ಹೊಂದಿಸಲಿಚ್ಛಿಸುವವರು ಕಾರ್ಯ ಕ್ಷೇತ್ರವನ್ನು ಅಷ್ಟೇ ಸ್ವಾಭಾವಿಕವಾಗಿ ಇಡಬೇಕಾಗುತ್ತದೆ. ಕೃತಕ ವಿಜಂಭಣೆಗಳಿಗೆ ಭಾರತದ ಮಹಿಳೆಯರು ಬೆದರುತ್ತಾರೆ.

ಪಾಶ್ಚಿಮಾತ್ಯರಂತೆ ಭಾರತೀಯ ಮಹಿಳೆಯರು ನಿರಂಕುಶ ಪ್ರವರ್ತಕರಲ್ಲ. ಭಾರತೀಯರ ಸಾಮಾಜಿಕ ರೀತಿ ನೀತಿಗಳು ಅವರ ಸ್ವಭಾವವನ್ನು ತೀರಾ ಮೃದುಗೊಳಿಸಿದೆ. ಆದರೆ ಭಾರತೀಯ ಮಹಿಳೆಯರು ಧೈರ್ಯವಂತರು ಮತ್ತು ಸಾಹಸಿಮಯಿಗಳು ಎಂಬುವುದಕ್ಕೆ ಪದ್ಮಿನಿ, ಅಹಲ್ಯಾಬಾಯಿ ಹೋಲ್ಕರ್ ಮೊದಲಾದವರನ್ನು ಉದಾಹರಿಸುತ್ತಾರೆ." ಲೇಖಕಿ ಬರಹಗಳ ಮೂಲಕ ತನ್ನ ಮನಸ್ಸಿನ ಭಾವನೆಗಳನ್ನು ಹೊರ ಚೆಲ್ಲಿದರೂ ಅದ್ಯಾವುದೋ ಕಾರಣಕ್ಕಾಗಿ ತನ್ನ ಅಸ್ಮಿತೆಯನ್ನು ಬಹಿರಂಗಪಡಿಸುವುದಿಲ್ಲ. ಸಮಾಜದಲ್ಲಿ ಗಂಡುಭೀರಿ ಎಂಬ ಹಣೆಪಟ್ಟಿಯನ್ನು ಪಡೆದುಕೊಳ್ಳಲು ಆಕೆ ಇಚ್ಛಿಸುವುದಿಲ್ಲ.

ಫೆಬ್ರವರಿ ೯, ೧೯೩೯ರ ನವಯುಗ ಪತ್ರಿಕೆಯಲ್ಲಿ, ಜನವರಿ ೨೫, ೧೯೩೯ರಲ್ಲಿ ಬಾರಕೂರಿನಲ್ಲಿ ನಡೆದ ಅಖಿಲ ತುಳುನಾಡಿನ ಸ್ತ್ರೀ ಸಮ್ಮೇಳನದಲ್ಲಿ ಬಾರಕೂರಿನಿಂದ ಮಂಗಳೂರಿನವರೆಗಿನ ಎಲ್ಲಾ ಪ್ರಖ್ಯಾತ ಮಹಿಳೆಯರು ಚಿತ್ತೃಸಿ ಅನೇಕ ವಿಚಾರಗಳನ್ನು ಮಂಡಿಸಿದ ಭಾಷಣದ ವರದಿಯನ್ನು ಉಡುಪಿಯ ಬಿ. ಶಾಮ್ರಾಯ ಶೆಟ್ರು ಪ್ರಕಟಿಸಿದ್ದಾರೆ. ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ವಹಿಸಿದ್ದ ಶ್ರೀಮತಿ ಗೌರಮ್ಮನವರು ತುಳುನಾಡಿನ ಮಹಿಳೆಯರ ಏಳಿಗೆಗಾಗಿ ದುಡಿಯುವವರಾಗಿದ್ದು ತಮ್ಮ ಭಾಷಣದಲ್ಲಿ ಲಿಂಗ ತಾರತಮ್ಯ ಸಲ್ಲದು ಮತ್ತು ಅದನ್ನು ಪ್ರೋತ್ಸಾಹಿಸಬಾರದು ಎಂದು ಹೇಳಿ ಇನ್ನು ಮುಂದೆ ಹೆಣ್ಣು ಮಗು ಹುಟ್ಟಿತೆಂದು ಕೇಳಿದರೆ ಮತ್ತು ಕಂಡರೆ ಆತ್ಮಾ ಹೊಂದತಕ್ಕದ್ದು ಮತ್ತು ಹೆಣ್ಣ ಕಡೆಯವರು ಎಂದು ಗಂಡು ಕಡೆಯವರು ಕೀಳುಗೈದರೆ ಸ್ತ್ರೀ ಸಮಾಜವು ವಿರೋಧಿಸಬೇಕು ಎಂದರು. ಮಿಸ್ ಬಿಯವರು ಈ ಸೂಚನೆಯನ್ನು ಅನುಮೋದಿಸಿ ಭಾಷಣ ಮಾಡಿದ ನಂತರ ಸರ್ವ ಸಮ್ಮತವಾಗಿ ಅಂಗೀಕೃತವಾಯಿತು. ನಂತರ ಮಾತನಾಡಿದ ನಾಗಮ್ಮನವರು ನಮ್ಮನ್ನು ನಾವೇ ತುಚ್ಛೀಕರಣ ಮಾಡಿಕೊಂಡದ್ದರಿಂದ ನಮ್ಮ ಬೆಲೆಯೇ ನಮಗೆ ತಿಳಿಯದಾಗಿದೆ. ಒಂದು ವಿರೋಧ ವ್ಯಕ್ತಪಡಿಸುವ ಕಮಿಟಿಯನ್ನು ಸ್ಥಾಪಿಸಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಪ್ರತಿಭಟಿಸಬೇಕು ಎಂದರು. ನಂತರ ದುರ್ಗಮ್ಮನವರು ಮಾತನಾಡಿ ವರದಕ್ಷಿಣೆಯೆಂಬ ಪಿಡುಗನ್ನು ತೊಲಗಿಸಬೇಕೆನ್ನುವ ಬೇಡಿಕೆಯನ್ನಿತ್ತರು. ಲೇಖನದಲ್ಲಿ ಮಹಿಳೆಯರ ಹೆಸರುಗಳನ್ನು ಮಿಸ್ ಅ, ಮಿಸ್ ಬಿ, ಮಿಸ್ ಡಿ ಎಂಬುವುದಾಗಿ ಉಲ್ಲೇಖಿಸಲಾಗಿದೆ. ಸ್ತ್ರೀಯರನ್ನು ಅ, ಬಿ, ಡಿ ಎಂಬುವುದಗಿ ಹೆಸರಿಸಿ ಅವರಿಗೆ ನೇರವಾಗಿ ಸಲ್ಲಬೇಕಾಗಿದ್ದ ಗೌರವವನ್ನು ನಿರಾಕರಿಸಲಾಗಿದೆ.

## ಪತ್ರಿಕಾ ಬರಹಗಳಲ್ಲಿನ ಮಹಿಳಾ ಬದುಕಿನ ಒಳನೋಟ

ನವಯುಗ ಪತ್ರಿಕೆಯ ಮಹಿಳಾ ಲೋಕದಲ್ಲಿ ಹರಿಹರದ ಉರ್ದೂ ಸ್ಕೂಲಿನ ಸುಬ್ರಮಣ್ಯಂರವರು "ಹಿಂದೂ ಮಹಿಳೆಯರ ಭಯಂಕರ ಸ್ಥಿತಿ" ಎಂಬ ಲೇಖನವು, ದಶಂಬರ ೮, ೧೯೩೮ ರಲ್ಲಿ ಪ್ರಕಟವಾಯಿತು. ಪುರುಷರು ಮರಣಪರ್ಯಂತ ಎಷ್ಟು ಸಾರಿಯೂ ಮದುವೆ ಮಾಡಿಕೊಳ್ಳಬಹುದು. ಅದಕ್ಕೆ ಶಾಸ್ತ್ರ ಸಮ್ಮತಿ ಇದೆ. ಆದರೆ ಸ್ತ್ರೀಯರು ಬಾಲವಿಧವೆಯರಾದರೂ ಕೊನೆಗೆ ಬ್ರಹ್ಮಚಾರಿಣಿಯಾಗಿರಬೇಕು. ಇದು ಪರಮಾವಧಿಯಲ್ಲವೇ? ಎಂಬುವುದಾಗಿ ಪ್ರಶ್ನಿಸಿದ್ದಾರೆ. ಫೆಬ್ರವರಿ ೨೨, ೧೯೪೦ರ ನವಯುಗ ಪತ್ರಿಕೆಯಲ್ಲಿ ರಬೀಂದ್ರನಾಥ ಟಾಗೂರರ ಅಭಿಪ್ರಾಯದಂತೆ "ಹಿಂದೂ ಸಮಾಜದಲ್ಲಿ ಹುಡುಗಿಗೆ ಬಾಲ್ಯದಿಂದಲೆ, ಪತಿಯ ವಿಚಾರವಾಗಿ ಪೂಜ್ಯ ಭಾವನೆಗಳನ್ನು ಉಪದೇಶಿಸುವರು. ಉದಾಹರಣೆಗೆ-ಕತೆಗಳು ಹಾಡುಗಳು, ಹಬ್ಬ ಹರಿದಿನಗಳು, ಪ್ರಾರ್ಥನೆಗಳು, ಮುಂತಾಗಿ ಎಲ್ಲೆಡೆಯಲ್ಲಿಯೂ, ಎಲ್ಲಕಾಲದಲ್ಲಿಯೂ ಇರುವುದು ಕಂಡು ಬರುತ್ತದೆ. ಆದುದರಿಂದ ಹುಡುಗಿಗೆ ವಿವಾಹವಾದ ಮೇಲೆ, ಆಕೆಯ ಪತಿಯು ಆಕೆಯ ದೃಷ್ಟಿಕೋನದಲ್ಲಿ ಎಲ್ಲರಂತೆ ಒಬ್ಬ ಮನುಷ್ಯನಾಗಿರುವುದಿಲ್ಲ. ಮಾತೃಭೂಮಿಯ ಪ್ರೇಮದಂತೆ ಒಂದು ಗೊತ್ತಾದ ಸಿದ್ಧಾಂತ ಅಥವಾ ಸಂಸ್ಥೆಯಾಗಿ ಬಿಡುವನು."ಎಂದಿದೆ. ಭಾರತದ ಸಂಪ್ರದಾಯಿಕ ಸಮಾಜದ ಮುಖಚಿತ್ರಣವನ್ನು ಟಾಗೋರಾರು ಉಲ್ಲೇಖಿಸಿದ್ದಾರೆ.

ಇಂಗ್ಲಿಷ್ ಲೇಖನವೊಂದರ ಆಧಾರದಿಂದ "ಗೃಹಿಣಿಯರ ಗೃಹ ರಕ್ಷಣೆಯ ಮಹತ್ವ" ಎಂಬ ಶೀರ್ಷಿಕೆಯಡಿಯಲ್ಲಿ ಲೇಖನವು ದಿನಾಂಕ ದಶಂಬರ ೨೯, ೧೯೩೮ರ ನವಯುಗ ಪತ್ರಿಕೆಯಲ್ಲಿ ಪ್ರಕಟವಾಯಿತು. ಜನಾಂಗದ ಏಳಿಗೆಯು ಸ್ತ್ರೀಯನ್ನು ಹೊಂದಿಕೊಂಡಿರುವುದು. ಬಾಲಕರನ್ನು ಸುಶಿಕ್ಷಿತರನ್ನಾಗಿ ಮಾಡುವ ಪುರು ಷರನ್ನು ಸುಧಾರಣೆಯ ಹಾದಿಯಲ್ಲಿ ನಡೆಸುವ ಪವಿತ್ರ ಕಾರ್ಯವು ಸ್ತ್ರೀಯರದ್ದಾಗಿದೆ. ವಂಶದ ರಕ್ಷಣೆ, ಜನಾಂಗದ ಪಾವನತೆ, ದೇಶದ ಅಭ್ಯುದಯವು ಮಾತೃತ್ವದ ಅಧೀನವಿರುವುದು ಹಾಗೂ ಲೇಖನದ ಕೊನೆಯಲ್ಲಿ ಪ್ರಸಿದ್ಧ ಆಂಗ್ಲೇಯ ಕವಿಯಾದ ಶೇಕ್ಸ್ ಪಿಯರ್ಸ್ ಉಲ್ಲೇಖಿವಿದೆ "ಸ್ತ್ರೀಯರನ್ನು ವಿಶ್ವಾಸಪೂರಿತ, ಭ್ರಮೆಗೊಳಪಡದ, ಬಹುತಿಳುವಿನ ದೋಷರಹಿತ ನ್ಯಾಯಮಾರ್ಗದ ಉಚ್ಛ, ಶುದ್ಧ ಆದರ್ಶವನ್ನೀಯುವ ಪವಿತ್ರತೆಯ ದಾರಿಗೆ ಮುನ್ನಡೆಸುವ ಜೀವನದ ಹಿತೈಷಿಗಳೆಂದು ಕೊಂಡಾಡಿರುವ ಕುರಿತು ಬರೆದಿದ್ದಾರೆ. ಜೂನ್ ೮, ೧೯೩೯ರ ನವಯುಗ ಪತ್ರಿಕೆಯಲ್ಲಿ ಎಸ್. ಎಲ್. ಸುಬ್ರಮಣ್ಯರವರು "ಪರಮ ವೈರಿ ವರದಕ್ಷಿಣೆ" ಎಂಬ ಲೇಖನದಲ್ಲಿ ಹಿಂದೂ ಸಮಾಜದ ದುಷ್ಟ ಪದ್ಧತಿಗಳಲ್ಲಿ ವರದಕ್ಷಿಣೆಯು ಬಹಳ ಭಯಂಕರವೂ ಅನಿಷ್ಟಕರವೂ ಆಗಿದ್ದು ಸಮಾಜವನ್ನು ಸಮೂಲವಾಗಿ ತಿನ್ನುತ್ತಿದೆ. ಈ ಕೆಟ್ಟ ಪದ್ಧತಿಯಿಂದ ಅನೇಕ ಸಹೋದರಿಯರು ಕೌಮಾರ ಜೀವನದಲ್ಲೇ ಇರುವರು ಹಾಗೂ ಕೆಲವರ ವಿವಾಹವು ವೃದ್ಧರೊಡನೆ ಆಗಿ ನಂತರ ಶಾಶ್ವತ ವೈಧವ್ಯವನ್ನು ಅನುಭವಿಸಬೇಕಾಗಿ ಬರುವುದು. ಇದಕ್ಕೆ ಪರಿಹಾರ ಲಭಿಸುವುದೇ? ಎಂದು ಪ್ರಶ್ನಾತೀತವಾಗಿ ಓದುಗರ ಮುಂದಿಟ್ಟಿದ್ದಾರೆ.

"ವರದಕ್ಷಿಣೆ ಪದ್ಧತಿಯು ನಿರ್ನಾಮವಾಗುವುದೆಂದು?" ೨ನೇ ಮಾರ್ಚ್ ೧೯೩೯ರ ರಾಷ್ಟ್ರಬಂಧು ಪತ್ರಿಕೆಯಲ್ಲಿ ಯಾವ ರೀತಿಯಲ್ಲಿ ವರದಕ್ಷಿಣೆ ಪದ್ಧತಿಯು ನಿರ್ನಾಮವಾಗಬಹುದು ಎಂಬುವುದರ ಕುರಿತು ಚರ್ಚಿಸಲಾಗಿದೆ. "ಸ್ತ್ರೀಯರಿಗೆ ಯಾವರೀತಿಯ ಶಿಕ್ಷಣವನ್ನು ಕೊಡಬೇಕು?" ಎಂಬ ಕೆ.ಎಸ್.

ಸೀತಾರಾಮಯ್ಯರವರ ಲೇಖನದಲ್ಲಿ ಇತ್ತೀಚೆಗೆ ಉಚ್ಚ ಶಿಕ್ಷಣವನ್ನು ಪಡೆದ ಮಹಿಳೆಯರೂ ಧರ್ಮಶಿಕ್ಷಣದ ಕಡೆಗೆ ಹೆಚ್ಚು ಲಕ್ಷ್ಯವಿಡುತ್ತಿಲ್ಲ. ಧರ್ಮ ಶಿಕ್ಷಣವು ಮಹಿಳೆಯರಿಗೆ ಅನಿವಾರ್ಯವಾದದ್ದು. ವಿದೇಶೀಯ ಶಿಕ್ಷಣದ ಪ್ರಭಾವದಿಂದ ನಮ್ಮವರ ಹೃದಯದಲ್ಲಿ ಧರ್ಮಕ್ಕೆ ಸ್ಥಾನವಿಲ್ಲದಂತಾಗಿದೆ ಎಂದಿದ್ದಾರೆ."

ದಶಂಬರ ೨೨, ೧೯೪೦ರಲ್ಲಿ ನಡೆದ ದಕ್ಷಿಣ ಕನ್ನಡ ಜಿಲ್ಲಾ ಮಹಿಳಾ ಪರಿಷತ್ತಿನ ಸ್ವಾಗತಾಧ್ಯಕ್ಷೆಯಾದ ಲೀಲಾಬಾಯಿ ಕಾಮತ್ ರವರು ನೀಡಿದ ಭಾಷಣದ ವರದಿ ದಶಂಬರ ೨೮, ೧೯೪೦ರ ನವಯುಗ ಪತ್ರಿಕೆಯಲ್ಲಿ ಪ್ರಕಟಗೊಂಡಿತ್ತು. ಮಹಿಳಾ ಸಂಬಂಧಿ ಸಮಸ್ಯೆಗಳನ್ನು ಕುರಿತು ಉಪನ್ಯಾಸ ನೀಡಿದ ಇವರು "ಇಂದು ಮದುವೆಯೆಂದರೆ ಒಂದು ತರಹದ ವ್ಯಾಪಾರವಾಗಿದೆ. ಹೆಚ್ಚು ಗಂಡು ಮಕ್ಕಳಿದ್ದವನು ಹೆಚ್ಚಿನ ಲಾಭ ಪಡೆಯುವ ವ್ಯಾಪಾರಿಯಾಗಿದ್ದಾನೆ. ಮದುವೆಯಾಗದ ಸ್ತ್ರೀಯರ ಆತ್ಮಹತ್ಯೆಯ ವಾರ್ತೆ ಗಳನ್ನು ದಿನಂಪ್ರತಿ ಕೇಳುತ್ತಿದ್ದೇವೆ. ಈ ಪದ್ಧತಿಯನ್ನು ನಾಶಮಾಡದ ವಿನಹ ಸ್ತ್ರೀಯರ ಪ್ರಗತಿ ಅಸಾಧ್ಯ ಮತ್ತು ಇಂದಿನ ವಿಧವಾ ಪದ್ಧತಿಯು ಆತ್ಮಹತ್ಯೆ ಅಥವಾ ವ್ಯಭಿಚಾರಕ್ಕೆ ಪ್ರೋತ್ಸಾಹ ಕೊಡುವಂತಿದೆ. ಇಂದು "ತೊಟ್ಟಿಲು ತೂಗುವ ಕೈ ರಾಜ್ಯವಾಳಬಲ್ಲುದು" ಎಂಬ ಗಾದೆಯ ತೇಜಃ ಪ್ರತಿಬಿಂಬ ಮತ್ತು ಜೀವನಮೂರ್ತಿಗಳಾದ ಪ್ರಾಚೀನ ಹಾಗೂ ಆಧುನಿಕ ವೀರ ಮಹಿಳೆಯರ ನಿದರ್ಶನಗಳನ್ನು ಕೊಟ್ಟರು. ಉಡುಪಿ, ಮಂಗಳೂರು ಮತ್ತು ಕಾರ್ಕಳ ಹಾಗೂ ಜಿಲ್ಲೆಯ ಸುಶಿಕ್ಷಿತ ಮಹಿಳೆಯರು ಸಾಕಷ್ಟು ಸಂಖ್ಯೆಯಲ್ಲಿ ನೆರೆದಿದ್ದರು. ಪರಿಷಧ್ಯಕ್ಷೆ ಶ್ರೀಮತಿ ಸೋನ್ಸ್ ರವರು ಮಾತನಾಡಿ "ಹೆಂಗಸಿನ ಪೂರ್ತಿ ಬೆಂಬಲವಿದ್ದರೇನೇ ಪುರುಷನ ಕಾರ್ಯ ಫಲಿಸಬಲ್ಲುದೆಂದೂ, ಇಂತಹ ಜವಾಬ್ದಾರಿ ಮತ್ತು ಸಮಾನತೆ ಪಡೆದಿರುವ ಮಹಿಳೆಯರಿಗೆ ಯೋಗ್ಯ ಶಿಕ್ಷಣ ದೊರೆಯಬೇಕೆಂದೂ ವಾದಿಸಿದರು."

ದಕ್ಷಿಣ ಕನ್ನಡದ ಪತ್ರಿಕೆಗಳಲ್ಲಿ ಸ್ಥಳೀಯ ಸುದ್ದಿಗಳು ಮಾತ್ರವಲ್ಲದೆ ಕರ್ನಾಟಕದ ಇತರ ಭಾಗಗಳಲ್ಲಿ ಸ್ತ್ರೀ ಜಾಗೃತಿ ಕುರಿತು ನಡೆಯುತ್ತಿದ್ದ ಕಾರ್ಯಕ್ರಮಗಳ ವರದಿಯನ್ನೂ ಪ್ರಕಟಿಸಲಾಗುತ್ತಿತ್ತು. ಉದಾಹರಣೆಗೆ ೧೯೪೦ರ ಫೆಬ್ರವರಿ ೫ ರಂದು "ಸ್ತ್ರೀ ವಿದ್ಯಾಭ್ಯಾಸ ಮತ್ತು ಗೃಹಿಣಿ ಧರ್ಮ" ದ ಕುರಿತಂತೆ ಬೆಂಗಳೂರಿನ ಮಹಾರಾಣಿ ಕಾಲೇಜಿನ ಘಟಿಕೋತ್ಸವದಲ್ಲಿ ಸರ್. ಮಿರ್ಜಾ ಇಸ್ಮಯಿಲ್ ರವರು ಮಾಡಿದ ಭಾಷಣದ ವರದಿ ಫೆಬ್ರವರಿ ೧೫, ೧೯೪೦ರ ನವಯುಗ ಪತ್ರಿಕೆಯಲ್ಲಿ ಪ್ರಕಟಗೊಂಡಿತ್ತು. ಅವರ ಅಭಿಪ್ರಾಯದಂತೆ "ಇಂದು ಸ್ತ್ರೀಪುರರ ಜೀವನಕ್ರಮಗಳಿಗಿರುವ ಭೇದವು ಐವತ್ತು ವರ್ಷಗಳು ಹಿಂದಿರುವುದಕ್ಕಿಂತಲೂ ಕಡಿಮೆಯಾಗಿದೆ. ಈಗ ಸ್ತ್ರೀಯರ ಜೀವನ ವಿಧಾನದಲ್ಲಿ ಗೃಹಿಣಿ ಧರ್ಮಗಳೂ ಸೇರಿರುತ್ತದೆ. ಗೃಹಕೃತ್ಯದ ಕೆಲಸಗಳು ಮಾತ್ರವಲ್ಲದೆ ಕುಟುಂಬಕ್ಕೆ ಸಂಬಂಧಪಡದ ಕೆಲಸಗಳೂ ಸೇರಿರುತ್ತದೆ. ಸತ್ಪ್ರಜೆಗಳ ಕರ್ತವ್ಯಗಳನ್ನು ನಿರ್ವಹಿಸುವ ಪ್ರಜಾಧರ್ಮವೂ ಮಹಿಳೆಯರ ಜೀವನ ವಿಧಾನದಲ್ಲಿ ಸೇರಿರುತ್ತದೆ, ತಾನು ಹೇಳಿರುವುದನ್ನು ಯಾರೂ ತಪ್ಪು ತಿಳಿದುಕೊಳ್ಳುವುದಿಲ್ಲವೆಂದು ಹೇಳಿ ಮುಂದುವರಿಸಿ ಗೃಹಿಣಿಧರ್ಮವನ್ನು ಸರಿಯಾಗಿಯೂ ಜಾಗರುಕತೆಯಿಂದಲೂ ನಡೆಸಿಕೊಂಡು ಬಂದಲ್ಲಿ ಮಾತ್ರವೇ ಜನಜೀವನವು ಸರ್ವ ವಿಧಗಳಲ್ಲಿಯೂ ಸೊಂಪುಗೂಡಿ ಬೆಳಗಲು ಸಾಧ್ಯ ಹಾಗೂ ಕೇವಲ ಗೃಹ ಕಾರ್ಯ ಮಾತ್ರವಲ್ಲದೆ ಸಮಾಜಸೇವೆಯಲ್ಲೂ ಆಸಕ್ತಿ ವಹಿಸಲು ಸಾಧ್ಯ ಎಂದಿರುವರು.

## ಉಪಸಂಹಾರ

ಕರಾವಳಿಯ ಪತ್ರಿಕೆಗಳ ಅಧ್ಯಯನವು ಮಹಿಳೆಯರ ಬದುಕು ಒಂದೇ ರೀತಿಯ ಅನುಭವದಿಂದ ರೂಪುಗೊಂಡಿರಲಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಪತ್ರಿಕಾ ಪುಟಗಳಲ್ಲಿ ಮೂಡಿಬಂದ ಮಹಿಳಾ ಬದುಕಿನ ಚಿತ್ರಣಗಳು ಕುಟುಂಬ, ಶಿಕ್ಷಣ, ವಿವಾಹ, ಸಾಮಾಜಿಕ ನಿರ್ಬಂಧಗಳು, ಹಕ್ಕುಗಳು ಮತ್ತು ಸಾರ್ವಜನಿಕ ಜೀವನದ ಕುರಿತ ಸಮಕಾಲೀನ ಚರ್ಚೆಗಳಿಗೆ ಹೊಸ ಆಯಾಮವನ್ನು ನೀಡಿದವು. ಹೀಗಾಗಿ ಕರಾವಳಿಯ ಪತ್ರಿಕಾ ಲೋಕವು ಮಹಿಳೆಯರನ್ನು ಕೇವಲ ಸಾಮಾಜಿಕ ವ್ಯವಸ್ಥೆಯ ಒಂದು ಭಾಗವಾಗಿ ಚಿತ್ರಿಸುವುದಕ್ಕಿಂತ, ಅವರ ಬದುಕಿನ ಸಂಕೀರ್ಣತೆ, ಆಶಯಗಳು ಮತ್ತು ಹಕ್ಕುಗಳ ಕುರಿತು ಚಿಂತನೆಗೆ ವೇದಿಕೆಯಾಯಿತು. ಈ ಪತ್ರಿಕಾ ದಾಖಲೆಗಳು ಮಹಿಳಾ ಬದುಕಿನ ಸಮಕಾಲೀನ ಚಿತ್ರಣವನ್ನು ಅರಿಯಲು ಮಾತ್ರವಲ್ಲದೆ, ಕರಾವಳಿ ಸಮಾಜದಲ್ಲಿ ರೂಪುಗೊಂಡ ಸಾಮಾಜಿಕ ಚಿಂತನೆಗಳ ವೈವಿಧ್ಯ ಮತ್ತು ಬದಲಾವಣೆಯ ಸ್ವರೂಪವನ್ನು ಗುರುತಿಸಲು ಸಹ ಮಹತ್ವದ ಐತಿಹಾಸಿಕ ಆಕರಗಳಾಗಿ ಪರಿಣಮಿಸುತ್ತವೆ.

### ಪ್ರಾಥಮಿಕ ಆಕರಗಳು

೧. ಮಂಗಳೂರು ಸಮಾಚಾರ(ಪತ್ರಿಕೆ)
೨. ನವಯುಗ (ಪತ್ರಿಕೆ)
೩. ರಾಷ್ಟ್ರ ಬಂಧು (ಪತ್ರಿಕೆ)
೪. ಸ್ವದೇಶಾಭಿಮಾನಿ (ಪತ್ರಿಕೆ)
೫. ಕಂಠೀರವ (ಪತ್ರಿಕೆ)

### ಪರಾಮರ್ಶನಾ ಗ್ರಂಥಗಳು

೧. ಬಿ.ವಿ.ಕಕ್ಕಿಲಾಯ.,ನಿರಂತರ, ಎಂ.ಎಸ್. ಕಷ್ಣನ್ ಸ್ಮರಣಾ ಸಂಸ್ಥೆ, ಬೆಂಗಳೂರು, ೨೦೦೯, ಪುಟ ೩೧೬.
೨. ೨. ಶ್ರೀವಳ್ಳಿ. ಟಿ. ಎಸ್.,ಸರಸ್ವತಿಬಾಯಿ ರಾಜಾವಾಡೆ, ಶಿವರಾಮ ಕಾರಂತ ಅಧ್ಯಯನ ಕೇಂದ್ರ,
೩. ಪುತ್ತೂರು,೨೦೦೦,ಪುಟ ೧೬.
೪. ಮನೋರಮಾ ಎಂ.ಭಟ್., ದಕ್ಷಿಣ ಕನ್ನಡ ಜಿಲ್ಲೆಯ ಮೊದಲ ಲೇಖಕಿಯರು, ಕರಾವಳಿ ಲೇಖಕಿಯರ – ವಾಚಕಿಯರ ಸಂಘ, ದ.ಕ ಮತ್ತು ಕಾಸರಗೋಡು, ೧೯೯೬, ಪುಟ೧೨-೨೩,೭೬-೭೭.
೫. ಜೆರಾಲ್ಡಿನ್ ಫೋಭ್ಸ್, ಆಧುನಿಕ ಭಾರತದಲ್ಲಿ ಮಹಿಳೆ,ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ೨೦೦೧.
೬. ಶಿವರಾಮ ಶೆಟ್ಟಿ. ಬಿ., ನಾಡು ನುಡಿ ಪ್ರಥಿನಿಧೀಕರಣದ ಕಥನ, ಮಂಗಳೂರು ವಿಶ್ವವಿದ್ಯಾನಿಲಯ, ೨೦೦೬.
೭. Sangeetha Ray., En-Gendering India, Duke university Press, Durham and London, ೨೦೦೦